ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 307/2023

ಪ್ರಾಸಾ : 01
ಚಾಸಾ : 01

| | | |
|---|---|---|
| ಹೆಸರು | : | ಕೇಶವ ಗೌಡ |
| ತಂದೆಯ ಹೆಸರು | : | ವೆಂಕಪ್ಪ ಗೌಡ |
| ಪ್ರಾಯ | : | 47 ವರ್ಷ |
| ಉದ್ಯೋಗ | : | ಹೋಟೆಲ್ ಕೆಲಸ |
| ವಾಸಸ್ಥಳ | : | ಅನಂತಾಡಿ ಗ್ರಾಮ |

ದಿಃ 05.07.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಕೊಡಾಜೆಯಲ್ಲಿ " ಶ್ರೀದೇವಿ " ಎಂಬ ಹೆಸರಿನ ಹೋಟೆಲ್ ನ ಮಾಲಿಕನಾಗಿ ನಡೆಸಿಕೊಂಡು ಬರುತ್ತಿದ್ದೇನೆ. ನಮ್ಮ ಅಂಗಡಿಯ ಬಲ ಬದಿಯಲ್ಲಿ ಅಬೂಬಕ್ಕರ್ ಚಾಸಾ-2 ರವರ ಹೋಟೆಲ್, ಅದರ ಪಕ್ಕದಲ್ಲಿ ಒಂದು ತಂಗುದಾಣ, ಅದರ ಪಕ್ಕದಲ್ಲಿ ಹಸೈನರ್ ಚಾಸಾ-3 ರವರ ಅಂಗಡಿಯಿದೆ. ಬೆಳಗ್ಗೆ 7.00 ಗಂಟೆಯಿಂದ ರಾತ್ರಿ 9.00 ಗಂಟೆ ವರೆಗೆ ನನ್ನ ಹೋಟೆಲ್ ತೆರೆದಿರುತ್ತದೆ.

2. ದಿ.05.05.2022 ರಂದು ಬೆಳಗ್ಗೆ 7.00 ಗಂಟೆಯಿಂದ ರಾತ್ರಿ 9.00 ಗಂಟೆ ವರೆಗೆ ನಾನು ಅಂಗಡಿಯಲ್ಲಿದ್ದೇನು. ಕೆಲಸ ಮುಗಿಸಿಕೊಂಡು ಅಂಗಡಿ ಬಂದ್ ಮಾಡಿ ಮನೆಗೆ ಹೊಗಿರುತ್ತೇನೆ. ದಿ. 06.05.2022 ರಂದು ಮಂಜಾನೆ 1.15 ಗಂಟೆಗೆ ಹಸೈನರ್ ಚಾಸಾ-3 ರವರು ಪೋನ್ ಕರೆ ಮಾಡಿ ನಿಮ್ಮ ಮತ್ತು ನಮ್ಮ ಅಂಗಡಿಗೆ

ಟೋಯಿಂಗ್ ವಾಹನವು ಡಿಕ್ಕಿ ಮಾಡಿ ಸದರಿ ವಾಹನವು ನಿಮ್ಮ ಅಂಗಡಿಯ ಒಳಗೆ ಹೋಗಿದೆ ಎಂದು ತಿಳಿಸಿದಾಗ ಕೂಡಲೇ ನಾನು ಬಂದು ನೋಡಿದಾಗ , 5 ಸಿಮೆಂಟ್ ಕಂಭ , 20 ಶೀಟ್ , ಮರದ ಬಾಗಿಲು , ದಾರಂದ , 5 ಕಡಪ ಟೇಬಲ್ , ಎಲ್ ಜಿ ಕಂಪನಿಯ ಒಂದು ಫ್ರೀಡ್ಜ , ಒಂದು ಲೂಮಿನಸ್ ಕಂಪನಿಯ ಇನವರ್ಟರ್ ಮತ್ತು ಬ್ಯಾಟರಿ , ವೊಲ್ಟ್ಯಾಸ್ ಕಂಪನಿಯ ಒಂದು ಫ್ರೀಡ್ಜ , ಕೆಂಪು ಕಲ್ಲಿನ ಗೋಡೆ ಮತ್ತು ಸಿಮೆಂಟ್ ಕಲ್ಲು ಮತ್ತು ಸಿಮೆಂಟ್ ಹಾಲೋ ಬ್ಲಾಕ್ ಹಾಗೂ ಇತರೆ ಸ್ವತ್ತುಗಳು ಜಕಂ ಆಗಿರುವುದು ಕಂಡು ಬಂದಿರುತ್ತದೆ. ಸದರಿ ಸ್ವತ್ತುಗಳು ಜಕಂ ಗೊಂಡು ಸುಮಾರು ಆರು ಲಕ್ಷ ರೂಪಾಯಿ ನಷ್ಟ ಉಂಟಾಗಿರುತ್ತದೆ. ಟೋಯಿಂಗ್ ವಾಹನದ ಸಂಖ್ಯೆ ಕೆಎ**-14-**ಬಿ**-2579** ಆಗಿತ್ತು**.** ಅದರ ಚಾಲಕನ ಹೆಸರು ಗೋಪಾಲ್ ಎಂದು ತಿಳಿಯಿತು. ಅಬೂಬಕ್ಕರ್ ಚಾಸಾ-2 ರವರ ಹೋಟೆಲ್ ನಲ್ಲಿ ಬೋರ್ಡ , ಶೀಟ್ ಹಾಕಿದ ಐದು ಕಂಭಗಳು ಜಕಂಗೊಂಡು ಸುಮಾರು ಐವತ್ತು ಸಾವಿರ ನಷ್ಟ ಉಂಟಾಗಿರುತ್ತದೆ. ಚಾಸಾ-3 ರವರ ನಂದಿನಿ ಹಾಲಿನ ಅಂಗಡಿಯಲ್ಲಿ 5 ಕಂಭ , ಶೀಟ್ , ಶೀಯಾಳದ ಬಾಕ್ಸ ಜಕಂಗೊಂಡು ಸುಮಾರು ಒಂದು ಲಕ್ಷ ರೂಪಾಯಿ ನಷ್ಟ ಉಂಟಾಗಿರುತ್ತದೆ.

3. ಕಬಕದಿಂದ ಮಾಣಿ ಕಡೆಗೆ ಹೋಗುವಾಗ ಮುಂಜಾನೆ 1.15 ಗಂಟೆಗೆ ಟೋಯಿಂಗ್ ವಾಹನವನ್ನು ಅದರ ಚಾಲಕ ಅಜಾಗರೂಕತೆಯಿಂದ ಎಡ ಬದಿಗೆ ಚಲಾಯಿಸಿದ ಪರಿಣಾಮದಿಂದಾಗಿ ಘಟನೆ ನಡೆದಿರುತ್ತದೆ. ಮಾರನೆ ದಿನ ಅಂದರೆ ದಿ. 06.05.2022 ರಂದು ವಿಟ್ಲ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರಿನಲ್ಲಿರುವ ಸಹಿಯನ್ನು ಸಾಕ್ಷಿ ತನ್ನದೆಂದು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸರಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಪೋಲಿಸರು ಸ್ಥಳಕ್ಕೆ ಬಂದಿದ್ದಾಗ ನಾನು ಹಾಜರಿದ್ದು ಸ್ಥಳವನ್ನು ತೋರಿಸಿಕೊಟ್ಟಂತೆ ಪರೀಶೀಲನೆ ನಡೆಸಿ ಮಹಜರ ಮತ್ತು ನಕಾಶೆಯನ್ನು ತಯಾರಿಸಿರುತ್ತಾರೆ. ಮಹಜರ ಮತ್ತು ನಕಾಶೆಯನ್ನು ನಿಪಿ-**2** ಮತ್ತು ನಿಪಿ-**3** ಎಂದು **,** ಸಾಕ್ಷಿಯ ಸಹಿಯನ್ನು ನಿಪಿ-**2(ಎ)** ಮತ್ತು ನಿಪಿ-**3(ಎ)** ಎಂದು ಗುರುತಿಸಲಾಯಿತು**.** ಸದರಿ ಮಹಜರಿಗೆ ಚಾಸಾ-4 ಮತ್ತು 5 ರವರು ಸಹಿ ಹಾಕಿರುತ್ತಾರೆ. ಸಂಜೆ 4.00 ಗಂಟೆಯಿಂದ 4.45 ರ ವರೆಗೆ ಮಹಜರ ತಯಾರಿಸಿರುತ್ತಾರೆ. ಕಲರ್ ಪೋಟೊದಲ್ಲಿ ಕಂಡು ಬರುವ ಕೆಎ**-14-**ಬಿ**-2579** ನ್ನು ಸಾಕ್ಷಿ ನೋಡಿ ಅದು ನಮ್ಮ ಅಂಗಡಿಯ ಒಳಗೆ ಜಕಂಗೊಳಿಸಿ ನಿಂತಿದ್ದ ವಾಹನ ಎಂದು ನುಡಿಯುತ್ತಾರೆ. ಸದರಿ ಕಲರ್ ನಾಲ್ಕು ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ**- 4** ರಿಂದ ನಿಪಿ**-7** ಎಂದು ಮತ್ತು ಸಿ**.**ಡಿಯನ್ನು ನಿಪಿ**-8** ಎಂದು ಗುರುತಿಸಲಾಯಿತು**.** ನ್ಯಾಯಾಲಯದ ಮಂದಿರುವ ಆರೋಪಿಯನ್ನು ಸದರಿ ವಾಹನದ ಚಾಲಕ ಗೋಪಾಲ ಎಂದು ಸಾಕ್ಷಿ ನೋಡಿ ಗುರುತಿಸಿದರು.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ -

5. ಪೋಲಿಸರು ಮಹಜರ ಜರುಗಿಸುವಾಗ ಕೆಎ**–14–**ಬಿ**–2579** ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ .

( ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದುಡಲಾಯಿತು.)

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ